PCR 3/2023
PW.1

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಶಿವಪ್ಪ ಯಲ್ಲಪ್ಪ ಮುಚ್ಚಂಡಿ |
| ತಂದೆಯ ಹೆಸರು | : ಶ್ರೀ ಯಲ್ಲಪ್ಪ ಮುಚ್ಚಂಡಿ |
| ವಯಸ್ಸು | : 24 ವರ್ಷ |
| ಉದ್ಯೋಗ | : ವಾಚಮನ್ ಮತ್ತು ಗೌಂಡಿ ಕೆಲಸ |
| ವಾಸ್ತವ್ಯ | : ಸೋನಟ್ಟಿ |
| ದಿನಾಂಕ | : 26-07-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**<u>ಕಲಂ 200 ಸಿ.ಆರ.ಪಿ.ಸಿ ಅಡಿ ಸ್ವಪ್ರಮಾಣೀಕೃತ ಹೇಳಿಕೆ</u>**

ನಾನು ಕಳೆದ 4 ವರ್ಷಗಳಿಂದ ಗಣೇಶಪುರದಲ್ಲಿರುವ ಕರುಣಾಕರ ನಾಯಕ ಎನ್ನುವವರ ಮನೆಯಲ್ಲಿ ವಾಚಮನ್ ಆಗಿ ಕೆಲಸ ಮಾಡುತ್ತಿದ್ದು, ಅವರ ಮನೆಯ ಪಕ್ಕದಲ್ಲಿ ಅವರದೊಂದು ಶೆಡ್ ಇದ್ದು, ಅದನ್ನು ನೋಡಿಕೊಂಡು ಹೋಗುತ್ತಿದ್ದೆ. ದಿಃ 24.05.2023 ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಹೊಸದಾಗಿ ಕಟ್ಟುತ್ತಿರುವ ಕರುಣಾಕರ ನಾಯಕ ಇವರ ಬಿಲ್ಡಿಂಗಿಗೆ ನೀರು ಬಿಡುತ್ತಿದ್ದೆ, ಆಗ ಅಲ್ಲಿಗೆ ಮೂರು ಜನ ಬಂದು ನನಗೆ ಇಲ್ಲಿ ಏನು ಮಾಡುತ್ತಿದಿಯಾ ನೀನು ಅಂತಾ ಕೇಳಿದ್ದು, ಆಗ ನಾನು ಇಲ್ಲಿ ವಾಚಮನ್ ಕೆಲಸ ಮಾಡುತ್ತೇನೆ ಅಂತಾ ಹೇಳಿದ್ದು, ಆಗ ಅವರಿಗೆ ನಾನು ತಾವು ಯಾರು ಎಂದು ಕೇಳಿದ್ದು, ವಿಶ್ವನಾಥ ಬಾಗಲೆ ತಾನು ಪೋಲಿಸ ಇರುವುದಾಗಿ ಹೇಳಿದ್ದು, ಆಗ ನನ್ನ ಹೆಸರು ಮತ್ತು ವಿಳಾಸವನ್ನು ಕೇಳಿದ್ದು, ನಾನು ಅವರಿಗೆ ನನ್ನ ಹೆಸರು ಶಿವಪ್ಪ ಯಲ್ಲಪ್ಪ ಮುಚ್ಚಂಡಿ ಅಂತಾ ಹೇಳಿದ್ದು, ಆಗ ನಿನ್ನದು ಯಾವ ಜಾತಿ ಎಂದು ಕೇಳಿದ್ದು, ಆಗ ನಾನು ಅವರಿಗೆ ನನ್ನದು ಹಿಂದೂ ನಾಯಕ(ಬೇಡರ) ಜಾತಿ ಎಂದು ಹೇಳಿದ್ದು ಆಗ ನನಗೆ ಅವಾಚ್ಯ ಶಬ್ದಗಳಾದ ನಿಮೌನ ಬ್ಯಾಡರ ಸೂಳೆಮಕ್ಕಳಾ ಅಂತಾ ಜಾತಿ ಎತ್ತಿ ಬೈದು ಅಲ್ಲಿಂದ ಹೊರಟು ಹೋದರು.

2. ಮತ್ತೆ ನಾನು ಮಾರನೇ ದಿನ ಮೇಲೆ ಹೇಳಿದ ಸ್ಥಳಕ್ಕೆ ವಾಚಮನ್ ಕೆಲಸಕ್ಕೆ ಹೋಗಿದ್ದು, ಆ ದಿನ ನಾನು ಶೆಡ್ ಮುಂದಿನ ಮಣ್ಣನ್ನು ತೆಗೆಯುತ್ತಿರುವಾಗ ಅಲ್ಲಿಗೆ ವಿಶ್ವನಾಥ ಬಾಗಲೆ, ಆತನ ಹೆಂಡತಿ, ಮಗ ಹಾಗೂ ಇತರ ಮೂರು ಜನ ನನ್ನ ಹತ್ತಿರ ಬಂದು ನಿನ್ನೆ ನಿನಗೆ ನಾಳೆ ಕೆಲಸಕ್ಕೆ ಬರಬೇಡ ಎಂದು ಹೇಳಿದ್ದರೂ ಸಹ ಏಕೆ ಬಂದು ಮಣ್ಣು ತೆಗೆಯುತ್ತಿದ್ದಿಯಾ ಅಂತಾ ಹೇಳಿ ವಿಶ್ವನಾಥ ಬಾಗಲೆ ರವರು ಕರೆದುಕೊಂಡು ಬಂದಂತಹ ಮೂರು ಜನರು ಸೇರಿ ಕೈಯಿಂದ ಬೆನ್ನಿಗೆ ಮತ್ತು ಮುಖಕ್ಕೆ ಹೊಡೆದರು, ಆಗ ವಿಶ್ವನಾಥ ಬಾಗಲೆರವರು ತನ್ನ ಜೊತೆಗೆ ಬಂದಂತಹ ಮೂರು ಜನರಿಗೆ ನನ್ನನ್ನು ತೋರಿಸಿ ಇತನು ಬೇಡರ ಜಾತಿಯವನಾಗಿರುತ್ತಾನೆ ಅಂತಾ ಹೇಳಿದ ನಂತರ ಸದರಿ ಮೂರು ಜನರೂ ಸಹ ನನಗೆ ಸೂಳೆಮಗನ ಅಂತಾ ಹಾಗೂ ಹಂಗಿಂಗ ಬೈದರು, ಅಷ್ಟರಲ್ಲಿ ಅಲ್ಲಿಗೆ ನಮ್ಮ ಮಾಲಕರಾದ ಕರುಣಾಕರ ನಾಯಕರವರು ಬಂದು ಸದರಿಯವರಿಗೆ ಏಕೆ ನಮ್ಮ ಹುಡುಗನನ್ನು ಬಡಿಯುತ್ತೀರಿ ಎಂದು ಕೇಳಿ ನನ್ನನ್ನು ಅವರಿಂದ ಬಿಡಿಸಿದರು, ಆಗ ಕರುಣಾಕರ ನಾಯಕರವರಿಗೆ ನೀನು ಸದರಿ ಜಾಗದಲ್ಲಿ ಅಳವಡಿಸಿದಂತಹ ಸಿಸಿ ಟಿವಿಯನ್ನು ತೆಗೆದುಹಾಕದಿದ್ದರೇ ನಿನ್ನ ಬಿಡುವುದಿಲ್ಲ, ಈಗಲೇ ತೆಗಿ ಎಂದು ಬೆದರಿಕೆ ಹಾಕಿದರು. ನಾನು ಅಲ್ಲಿಂದ ಸಿವಿಲ್ ಆಸ್ಪತ್ರೆಗೆ ಓಡಿ ಬಂದು ಆಸ್ಪತ್ರೆಯಲ್ಲಿ ಎಮ್.ಎಲ್.ಸಿ ಕೇಸನ್ನು ದಾಖಲು ಮಾಡಿಸಿದ್ದು, ಅಲ್ಲಗೆ ಪೋಲಿಸರು ಬಂದಿರಲಿಲ್ಲ, ನಾನೇ ಕ್ಯಾಂಪ್ ಪೋಲಿಸ ಠಾಣೆಗೆ ನನ್ನ ಮೇಲೆ ಹಲ್ಲೆ ಮಾಡಿದವರ ಮೇಲೆ ದೂರು ಕೊಡಲು ಹೋಗಿ, ದೂರನ್ನು ನನ್ನ ಕೈಯಿಂದ ಅವರಿಗೆ ಬರೆದುಕೊಟ್ಟಿದ್ದು, ಅದನ್ನು ಅವರು ಸ್ವೀಕರಿಸಿ ನಿನ್ನ ಕೇಸನ್ನು ತೆಗೆದುಕೊಳ್ಳುತ್ತೇವೆ ಅಂತಾ ಹೇಳಿ ನನ್ನನ್ನು ಅಲ್ಲಿಂದ ಕಳುಹಿಸಿದರು, ಆದರೆ ಸದರಿ ಪೋಲಿಸರು ನನ್ನ ದೂರಿನ ಆಧಾರದ ಮೇಲೆ ಕೇಸನ್ನು ದಾಖಲು ಮಾಡಿಕೊಳ್ಳಲಿಲ್ಲ.

3. ದಿಃ 29.05.2023 ರಂದು ಜಿಲ್ಲಾ ಅಧೀಕ್ಷಕರು, ಬೆಳಗಾವಿ ಇವರ ಕಚೇರಿಗೆ ಹೋಗಿದ್ದು, ಅಲ್ಲಿ ಹೋಗಿ ಮತ್ತೆ ಒಂದು ದೂರನ್ನು ಬರೆದುಕೊಟ್ಟಿರುತ್ತೇನೆ. ಅದನ್ನು ಅವರು ಸ್ವೀಕರಿಸಿ ನಿನ್ನ ಕೇಸನ್ನು ತೆಗೆದುಕೊಳ್ಳುತ್ತೇವೆ ಅಂತಾ ಹೇಳಿ ನನ್ನನ್ನು ಅಲ್ಲಿಂದ ಕಳುಹಿಸಿದರು. ಆದರೆ ಸದರಿಯವರು ನನ್ನ ದೂರಿನ ಆಧಾರದ ಮೇಲೆ ಕೇಸನ್ನು ದಾಖಲು ಮಾಡಿಕೊಳ್ಳಲಿಲ್ಲ. ನಂತರ ಈ ನ್ಯಾಯಾಲಯಕ್ಕೆ ಹಾಜರಾಗಿ ಖಾಸಗಿ ದೂರನ್ನು ನೀಡಿರುತ್ತೇನೆ.

PCR 3/2023
PW.1

**ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.